ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	83
ಸದಸ್ಯರ ಹೆಸರು	:	ಶ್ರೀ ಎಂ.ಎ.ಗೋಪಾಲಸ್ವಾಮಿ
ಉತ್ತರಿಸಬೇಕಾದ ದಿನಾಂಕ	:	01-02-2021
ಉತ್ತರಿಸುವ ಸಚಿವರು	:	ಮಾನ್ಯ ಸಮಾಜ ಕಲ್ಯಾಣ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಪಂಗಡಗಳ ಭೂ ರಹಿತ ಮಹಿಳೆಯರಿಗೆ ಭೂ ಒಡೆತನ ನೀಡುವ ಯೋಜನೆಯನ್ನು ಜಾರಿಗೊಳಸಲಾಗಿದೆಯೇ; ಹಾಗಿದ್ದಲ್ಲಿ, ಯಾವಾಗಿನಿಂದ ಈ ಯೋಜನೆ ಜಾರಿಯಲ್ಲಿದೆ; ಹಾಗೂ ಈ ಯೋಜನೆಯ ಮಾರ್ಗಸೂಚಿಗಳೇನು; (ಸಂಪೂರ್ಣ ವಿವರ ನೀಡುವುದು)</td><td>ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಫೆಬ್ರವರಿ-2007 ರಿಂದ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಅಂದಿನಿಂದಲೂ ನಿಗಮವು ಭೂ ಒಡೆತನ ಯೋಜನೆ ಅನುಷ್ಠಾನಗೊಳಸುತ್ತಿದೆ. ಯೋಜನೆಯ ಅನುಷ್ಠಾನ ಕುರಿತಂತೆ ಸರ್ಕಾರವು ದಿನಾಂಕ:11.06.2020 ರಂದು ಹೊರಡಿಸಿರುವ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳಂತೆ ಯೋಜನೆಯನ್ನು ಅನುಷ್ಠಾನಗೊಳಸಲಾಗುತ್ತಿದೆ.
ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
<tr><td>ಆ)</td><td>ಈ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಎಷ್ಟು ವಿಸ್ತೀರ್ಣದ ಭೂಮಿಯನ್ನು ವಿತರಣೆ ಮಾಡಲಾಗಿದೆ; (ಫಲಾನುಭವಿವಾರು ವಿವರ ನೀಡುವುದು)</td><td>2007-08 ರಿಂದ 2019-20ನೇ ಸಾಲಿನವರೆಗೆ ಹಾಸನ ಜಿಲ್ಲೆಯ ಒಟ್ಟು 12 ಪರಿಶಿಷ್ಟ ಪಂಗಡದ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕ ಕುಟುಂಬಗಳನ್ನು ಭೂ ಒಡೆಯರನ್ನಾಗಿಸಲಾಗಿದೆ. 12 ಫಲಾನುಭವಿಗಳ ಹೆಸರಿಗೆ ನೊಂದಣಿ ಮಾಡಿಸಲಾಗಿರುವ ಒಟ್ಟು ವಿಸ್ತೀರ್ಣ 17.33 ಎಕರೆಗಳಾಗಿದ್ದು, ಇದಕ್ಕಾಗಿ ವಿನಿಯೋಗಿಸಲಾಗಿರುವ ಒಟ್ಟು ಅನುದಾನ ರೂ.18.39 ಲಕ್ಷಗಳಾಗಿರುತ್ತದೆ. ವರ್ಷವಾರು ವಿವರಗಳು ಈ ಕೆಳಕಂಡಂತಿದೆ.
<table><tr><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th><th>ನೊಂದಣಿ ಮಾಡಿಸಲಾದ ಜಮೀನಿನ ಒಟ್ಟು ವಿಸ್ತೀರ್ಣ</th><th>ವಿನಿಯೋಗಿಸಲಾದ ಅನುದಾನ</th></tr><tr><td>2008-09</td><td>01</td><td>2.00 ಎಕರೆ</td><td>1.00 ಲಕ್ಷ</td></tr><tr><td>2009-10</td><td>03</td><td>6.00 ಎಕರೆ</td><td>3.60 ಲಕ್ಷ</td></tr><tr><td>2010-11</td><td>04</td><td>6.00 ಎಕರೆ</td><td>5.70 ಲಕ್ಷ</td></tr><tr><td>2011-12</td><td>04</td><td>3.33 ಎಕರೆ</td><td>8.09 ಲಕ್ಷ</td></tr></table>ಜಿಲ್ಲೆಯಿಂದ ಸ್ವೀಕರಿಸಲಾದ ಎಲ್ಲಾ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.
ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.</td></tr>
<tr><td>ಇ)</td><td>ಈ ಯೋಜನೆಯಡಿ ಸಾಕಷ್ಟು ಭ್ರಷ್ಟಾಚಾರಗಳು ನಡೆಯುತ್ತಿವೆ ಎಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಂಬಂಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?</td><td>ಭೂ ಒಡೆತನ ಅನುಷ್ಠಾನದಲ್ಲಿ ಭ್ರಷ್ಟಾಚಾರ ಕಂಡುಬಂದ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗಿರುತ್ತದೆ.</td></tr>
</table>

ಸಂಖ್ಯೆ: ಸಕಇ 33 ಎಸ್‌ಡಿಸಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಅನುಬಂಧ-I

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಭೂ ಒಡೆತನ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಭೂ ರಹಿತ ಕೃಷಿ ಕಾರ್ಮಿಕರಿಗೆ ಭೂ ಖರೀದಿಸಿ ಕೃಷಿ ಜಮೀನು ಒದಗಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಸಕಇ 107 ಎಸ್ ಡಿಸಿ 2016, ದಿನಾಂಕ:28.05.2016.
2. ಸರ್ಕಾರದ ಪತ್ರದ ಸಂಖ್ಯೆ:ಸಕಇ 148 ಎಸ್ ಡಿಸಿ 2017, ದಿನಾಂಕ:20.04.2017
3. ವ್ಯವಸ್ಥಾಪಕ ನಿರ್ದೇಶಕರು, ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರ ಏಕ ಕಡತ ದಿನಾಂಕ:31.10.2019.

******

112
15/6/20

ಪ್ರಸ್ತಾವನೆ:

ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತಗಳಿಂದ ಅನುಷ್ಠಾನಗೊಳಿಸುತ್ತಿರುವ ಭೂ ಒಡೆತನ ಯೋಜನೆಗೆ ಸಂಬಂಧಿಸಿದಂತೆ, ಸರ್ಕಾರದ ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ ಇಲಾಖೆ) ವಿವಿಧ ತರಹದ ಜಮೀನುಗಳಿಗೆ ಮಾರ್ಗಸೂಚಿ ಬೆಲೆಯನ್ನು ನಿರ್ಧರಿಸಿ ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆಗಳನ್ನು ಅನುಸರಿಸಿ ಪ್ರತಿ ಎಕರೆಗೆ ಮಾರ್ಗಸೂಚಿ ದರ (guidance value) ದಂತೆ ಭೂ ಒಡೆತನ ಯೋಜನೆಯಡಿಯಲ್ಲಿ ಖರೀದಿಸಲು ಅನುಮೋದನೆ ನೀಡಿ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಆದೇಶಿಸಿದೆ.

ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತಗಳಿಂದ ಅನುಷ್ಠಾನಗೊಳಿಸುತ್ತಿರುವ ಭೂ ಒಡೆತನ ಯೋಜನೆಯಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಭೂರಹಿತ ಕೃಷಿ ಕಾರ್ಮಿಕರಿಗೆ ಜಮೀನು ಖರೀದಿ ಮಾಡಿ ವಿತರಿಸಲು ಜಾರಿಯಲ್ಲಿರುವ ಘಟಕ ವೆಚ್ಚ ರೂ.10.00 ರಿಂದ 15.00 ಲಕ್ಷಗಳವರೆಗೆ ಹೆಚ್ಚಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಆದೇಶಿಸಿದೆ.

ಸದರಿ ಯೋಜನೆಯಡಿ ಫಲಾಪೇಕ್ಷಿಗಳಿಗೆ ಭೂಮಿ ಒದಗಿಸುವ ಸಂಬಂಧ ಪಡೆಯಬೇಕಾದ ವಿವಿಧ ದಾಖಲೆಗಳನ್ನು ಕ್ರೋಡೀಕರಿಸುವುದರಲ್ಲಿ ವಿಳಂಬವಾಗುತ್ತಿದ್ದು, ಇದರಿಂದಾಗಿ ಫಲಾಪೇಕ್ಷಿಗಳಿಗೆ ತ್ವರಿತವಾಗಿ ಯೋಜನೆಯ ಸೌಲಭ್ಯಗಳನ್ನು ನೀಡಲು ಸಾಧ್ಯವಾಗದ ಕಾರಣ, ಈ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ ಸೂಕ್ತ ಆದೇಶ ಹೊರಡಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 399 ಎಸ್ ಡಿಸಿ 2019, ಬೆಂಗಳೂರು, ದಿನಾಂಕ:11.06.2020

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ವಿವಿಧ ನಿಗಮ/ಅಲೆಮಾರಿ ಕೋಶಗಳ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಭೂ ರಹಿತ ಕೃಷಿ ಕಾರ್ಮಿಕರಿಗೆ ಭೂ ಒಡೆತನ ಯೋಜನೆಯಡಿ ಭೂಮಿಯನ್ನು ಒದಗಿಸುವ ಸಂಬಂಧ ಪಡೆಯಬೇಕಾದ ವಿವಿಧ ದಾಖಲೆಗಳನ್ನು ಹಾಗೂ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ ಈ ಕೆಳಕಂಡ ಮಾರ್ಗಸೂಚಿ / ನಿಬಂಧನೆಗಳನ್ನು ಅನುಸರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ.

ಮಾರ್ಗಸೂಚಿ / ನಿಬಂಧನೆಗಳು

1. ಜಿಲ್ಲಾ ವ್ಯವಸ್ಥಾಪಕರು ಪರಿಶಿಷ್ಟ ಜಾತಿ / ಪಂಗಡದ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಂದ ಏಪ್ರಿಲ್ ಮಾಹೆಯಲ್ಲಿ ಅರ್ಜಿ ಸಲ್ಲಿಸಲು ಸಮಯ ನಿಗದಿಪಡಿಸಿ, ಅರ್ಜಿಗಳನ್ನು ಪತ್ರಿಕಾ ಪ್ರಕಟಣೆ ಮೂಲಕ ಆಹ್ವಾನಿಸುವುದು.
2. ಜಮೀನು ಮಾರಾಟ ಮಾಡಲು ಇಚ್ಛಿಸಿರುವ ಭೂ ಮಾಲೀಕರಿಂದಲೂ ಸಹ ಏಪ್ರಿಲ್ ಮಾಹೆಯಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲು ಪತ್ರಿಕಾ ಪ್ರಕಟಣೆ ಮೂಲಕ ವ್ಯಾಪಕ ಪ್ರಚಾರ ನೀಡುವುದು.
3. ಭೂ ಲಭ್ಯತೆ ಮತ್ತು ಬೇಡಿಕೆಗೆ ಅನುಗುಣವಾಗಿ ವರ್ಷದ ಪ್ರಾರಂಭದಲ್ಲಿ ವಿವಿಧ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳು ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ವ್ಯವಸ್ಥಾಪಕರ ಜಂಟಿ ಖಾತೆಗೆ ಅನುದಾನ ಬಿಡುಗಡೆ ಮಾಡುವುದು.

4. **ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು (ನಿಗದಿತ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಅರ್ಜಿ ಮತ್ತು ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಿ ನಿಗಮದ ಜಿಲ್ಲಾ ಕಛೇರಿಯಲ್ಲಿ/ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು.)**

   ಅ) ಜಾತಿ ಪ್ರಮಾಣ ಪತ್ರ (ತಹಸೀಲ್ದಾರರಿಂದ)
   ಆ) ಆದಾಯ ಪ್ರಮಾಣ ಪತ್ರ (ತಹಸೀಲ್ದಾರರಿಂದ)
   ಇ) ಭೂ ರಹಿತ ಕೃಷಿ ಕಾರ್ಮಿಕರ ಪತ್ರ (ತಹಸೀಲ್ದಾರರಿಂದ)
   ಈ) ಆಧಾರ ಕಾರ್ಡ್ ಮತ್ತು ರೇಷನ್ ಕಾರ್ಡ್ (ಪಡಿತರ ಚೀಟಿ)

5. **ಭೂ ಮಾಲೀಕರು ನಮೂನೆ-1 ರ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು.**

   1. ಜಾತಿ ಪ್ರಮಾಣ ಪತ್ರ
   2. ಭೂ ಮಾರಾಟ ಮಾಡಲು ಮುಚ್ಚಳಿಕೆ ಪತ್ರ (ಛಾಪಾ ಕಾಗದದಲ್ಲಿ ನೋಟರಿ ಮಾಡಿಸಿ ಸಲ್ಲಿಸತಕ್ಕದ್ದು.)
   3. ಭೂ ಮಾಲೀಕರ ವಂಶಾವಳಿ (ಗ್ರಾಮ ಲೆಕ್ಕಾಧಿಕಾರಿಗಳಿಂದ ದೃಢೀಕರಿಸಿಕೊಂಡು ಸಲ್ಲಿಸತಕ್ಕದ್ದು.)
   4. ಕುಟುಂಬ ಸದಸ್ಯರ ನಿರಾಕ್ಷೇಪಣಾ ಪತ್ರ (NOC) (ಛಾಪಾ ಕಾಗದದಲ್ಲಿ ವಂಶಾವಳಿಯಲ್ಲಿರುವ ಸದಸ್ಯರು ನೋಟರಿ ಮಾಡಿಸಿ ಸಲ್ಲಿಸತಕ್ಕದ್ದು.)
   5. ಇತ್ತೀಚಿನ ಪಹಣಿ ಪತ್ರಿಕೆ ಮತ್ತು ಹಕ್ಕು ಬದಲಾವಣೆ ಪ್ರತಿ. (ಮ್ಯೂಟೇಷನ್ ಪ್ರತಿ)
   6. ಕಳೆದ 13 ವರ್ಷಗಳ ಇ.ಸಿ. (ಋಣಭಾರ ರಾಹಿತ್ಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.)

6. **ಜಿಲ್ಲಾ ವ್ಯವಸ್ಥಾಪಕರು ಕೈಗೊಳ್ಳಬೇಕಾದ ಕ್ರಮಗಳು.**

1. ಅರ್ಜಿದಾರರಿಂದ ಸ್ವೀಕೃತವಾಗುವ ಅರ್ಜಿಗಳು ಮತ್ತು ಭೂ ಲಭ್ಯತೆಗನುಗುಣವಾಗಿ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಕೇಂದ್ರ ಕಚೇರಿಗೆ ಸಲ್ಲಿಸುವುದು.
2. ಅರ್ಜಿ ಬಂದ ತಕ್ಷಣ ಜಿಲ್ಲಾ ಕಛೇರಿಯಿಂದ ಭೂ ಮಾಲೀಕರಿಗೆ ಕ್ರಮ ಸಂಖ್ಯೆ: 5 ರಲ್ಲಿ ನಮೂದಿಸಿದ ದಾಖಲಾತಿಗಳನ್ನು ಸಲ್ಲಿಸಲು ಲಿಖಿತವಾಗಿ ತಿಳಿಸುವುದು ಮತ್ತು 45 ದಿವಸಗಳಲ್ಲಿ ದಾಖಲಾತಿಗಳನ್ನು ಸಲ್ಲಿಸದೇ ಇದ್ದಲ್ಲಿ ಸೂಕ್ತ ಹಿಂಬರಹದೊಂದಿಗೆ ಪ್ರಕರಣವನ್ನು ಮುಕ್ತಾಯಗೊಳಿಸುವುದು.
3. ಫಲಾಪೇಕ್ಷಿಯು ಕ್ರಮ ಸಂಖ್ಯೆ (4) ರಲ್ಲಿ ನಮೂದಿಸಿದ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸದೇ ಇದ್ದಲ್ಲಿ ಅಂತಹ ಅರ್ಜಿಯನ್ನು ಸೂಕ್ತ ತಿಳುವಳಿಕೆಯ ಹಿಂಬರಹದೊಂದಿಗೆ ಹಿಂದಿರುಗಿಸುವುದು.
4. ಅರ್ಜಿದಾರರು (ಫಲಾಪೇಕ್ಷಿ) ಮತ್ತು ಅವರ ಕುಟುಂಬದ ಸದಸ್ಯರು ಕಳೆದ 05 ವರ್ಷಗಳಲ್ಲಿ ರೂ.1.00 ಲಕ್ಷಕ್ಕಿಂತ ಮೇಲ್ಪಟ್ಟು ನಿಗಮದಿಂದ ಸಾಲ / ಸಹಾಯಧನ ಪಡೆದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸತಕ್ಕದ್ದಲ್ಲ.
5. ಫಲಾಪೇಕ್ಷಿಗಳು ಭೂಮಿಯನ್ನು ಕೋರಿ ಅರ್ಜಿಗಳನ್ನು ಸಲ್ಲಿಸಲು ಮತ್ತು ಜಮೀನು ಮಾರಾಟ ಮಾಡಲು ಭೂ ಮಾಲೀಕರು ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಸಭೆಯ ಅನುಮೋದನೆ ಅಗತ್ಯವಿರುವುದಿಲ್ಲ.
6. ಅರ್ಜಿದಾರರು ಸಲ್ಲಿಸುವ ದಾಖಲೆಗಳನ್ನು ಪರಿಶೀಲನೆ ಮಾಡಿ ನಮೂನೆ-2 ರಲ್ಲಿ ವರದಿ ನೀಡುವಂತೆ ತಹಶೀಲ್ದಾರರನ್ನು ಕೋರುವುದು.
7. ತಹಶೀಲ್ದಾರರು ಜಿಲ್ಲಾ ವ್ಯವಸ್ಥಾಪಕರು/ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸಲ್ಲಿಸುವ ದಾಖಲೆಗಳನ್ನು ಪರಿಶೀಲಿಸಿ ನಮೂನೆ-2 ರಲ್ಲಿ 15 ದಿನಗಳೊಳಗಾಗಿ ವರದಿಯನ್ನು ನೀಡುವುದು.
8. ಜಿಲ್ಲಾ ವ್ಯವಸ್ಥಾಪಕರು ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಅರ್ಜಿ ಸ್ವೀಕರಿಸಿದ 30 ದಿನಗಳೊಳಗಾಗಿ ಸ್ಥಳ ಪರಿಶೀಲನೆ ಮಾಡತಕ್ಕದ್ದು.
9. ಸ್ಥಳ ಪರಿಶೀಲನಾ ವರದಿಯನ್ನು ನಮೂನೆ-3 ರಲ್ಲಿ ನಮೂದಿಸತಕ್ಕದ್ದು ಮತ್ತು ಸ್ಥಳ ಪರಿಶೀಲನಾ ಸಮಯದಲ್ಲಿ ಭೂ ಮಾಲೀಕರು ಮತ್ತು ಫಲಾನುಭವಿಗಳು ಇರುವ ಅಕ್ಷಾಂಶ ಮತ್ತು ರೇಖಾಂಶ ಸಹಿತ ಛಾಯಾ ಚಿತ್ರ ಹಾಗೂ ವಿಡಿಯೋವನ್ನು ಮಾಡತಕ್ಕದ್ದು.
10. ಜಿಲ್ಲಾ ವ್ಯವಸ್ಥಾಪಕರು, ಕಂದಾಯ ಇಲಾಖೆಯಿಂದ ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ನು(kar.igr.nic) (https://www.karnataka.gov.in/karigr/ Pages/Home.aspx) ಜಾಲತಾಣ (website) ನಲ್ಲಿ ಪಡೆದು, ಸ್ಥಳ ಪರಿಶೀಲನಾ ವರದಿ ಮತ್ತು ಇತರ ದಾಖಲಾತಿಗಳ ಸಹಿತ ಪ್ರಸ್ತಾವನೆಯನ್ನು ಚೆಕ್ ಲಿಸ್ಟ್ ನೊಂದಿಗೆ 30 ದಿನಗಳೊಳಗಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು.
11. ಜಿಲ್ಲಾ ವ್ಯವಸ್ಥಾಪಕರು, ಭೂ ಮಾಲೀಕರು ಅರ್ಜಿಯೊಂದಿಗೆ ಸಲ್ಲಿಸಿದ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ಸ್ವೀಕರಿಸಿದ ದಿನಾಂಕವನ್ನು ಜೇಷ್ಠತೆ ಎಂದು ಪರಿಗಣಿಸಿ ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು.
12. ಜಿಲ್ಲಾಧಿಕಾರಿ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವ ಮುನ್ನಾ ಎಲ್ಲಾ ದಾಖಲೆಗಳನ್ನು ಮೂಲ ಪ್ರತಿಗಳೊಂದಿಗೆ ತಾಳೆಮಾಡಿ ದೃಢೀಕರಿಸಿಕೊಳ್ಳತಕ್ಕದ್ದು.

7. ಜಿಲ್ಲಾಧಿಕಾರಿ ಕಛೇರಿಯಲ್ಲಿ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ ತೆಗೆದುಕೊಳ್ಳಬೇಕಾದ ಕ್ರಮಗಳು.

1. ಸ್ವೀಕರಿಸಿದ ಪ್ರಸ್ತಾವನೆಗಳನ್ನು ಒಂದು ವಹಿಯಲ್ಲಿ ದಾಖಲಿಸಿ ಅದರ ಜೇಷ್ಠತೆ ಅನುಸಾರ ಪರಿಶೀಲಿಸುವುದು.
2. ಒಂದು ವೇಳೆ ಪ್ರಸ್ತಾವನೆಯಲ್ಲಿ ಏನಾದರೂ ದಾಖಲಾತಿಗಳ ಕೊರತೆ ಇದ್ದಲ್ಲಿ ತಕ್ಷಣವೇ ಅಂತಹ ದಾಖಲಾತಿಗಳನ್ನು ಜಿಲ್ಲಾ ವ್ಯವಸ್ಥಾಪಕರಿಂದ ಪಡೆಯತಕ್ಕದ್ದು.
3. ಜಿಲ್ಲಾಧಿಕಾರಿಗಳು ಇಚ್ಛಿಸಿದ್ದಲ್ಲಿ ಅವರು ಅಥವಾ ಉಪ ವಿಭಾಗಾಧಿಕಾರಿಗಳು ಜಿಲ್ಲಾ ಸಮಿತಿಯ ಸಭೆಗೆ ಮುನ್ನಾ ಸ್ಥಳ ಪರಿಶೀಲನೆ ಮಾಡಬಹುದು. (ಈ ಪ್ರಕ್ರಿಯೆ ಒಟ್ಟಾರೆ ಕಾರ್ಯಕ್ರಮದ ಅನುಷ್ಠಾನವನ್ನು ವಿಳಂಬಗೊಳಿಸದಂತೆ ಎಚ್ಚರವಹಿಸುವುದು.)
4. ಜಿಲ್ಲಾ ವ್ಯವಸ್ಥಾಪಕರಿಂದ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ದರ ನಿಗದಿಪಡಿಸಲು ಭೂ ಮೌಲ್ಯ ನಿರ್ಧಾರಣ ಸಮಿತಿಯ ದಿನಾಂಕವನ್ನು ನಿಗದಿಪಡಿಸುವುದು.
5. ಜಿಲ್ಲಾಧಿಕಾರಿಗಳು ಕಂದಾಯ ಇಲಾಖೆಯ ಮಾರ್ಗಸೂಚಿ ಬೆಲೆಯನ್ನು ಒಂದು ಮಾನದಂಡವನ್ನಾಗಿ ಪರಿಗಣಿಸಿ ಜಮೀನಿನ ಫಲವತ್ತತೆ, ನೀರಾವರಿ ಸೌಕರ್ಯ ಇತ್ಯಾದಿಗಳ ಬಗ್ಗೆ ಪರಿಶೀಲಿಸಿ ಸೂಕ್ತ ಸಮರ್ಥನೆಯೊಂದಿಗೆ ದರ ನಿಗದಿಪಡಿಸುವುದು. ಯಾವುದೇ ಕಾರಣಕ್ಕೂ ಮಾರ್ಗಸೂಚಿ ಬೆಲೆಯ ಮೂರುಪಟ್ಟು ದರವನ್ನು ಯಾಂತ್ರಿಕವಾಗಿ ನಿಗದಿಪಡಿಸತಕ್ಕದಲ್ಲ. ದರ ನಿಗದಿಪಡಿಸುವ ಮುನ್ನಾ ಸಂಬಂಧಿಸಿದ ಭೂ ಮಾಲೀಕರೊಂದಿಗೆ ಫಲಾಪೇಕ್ಷಿಗಳ ಸಮ್ಮುಖದಲ್ಲಿ ದರ ಸಂಧಾನ ನಡೆಸುವುದು.
6. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಸಮಿತಿಯಲ್ಲಿ ದರ ನಿಗದಿಪಡಿಸಿದ ಸಭೆಯ ದಿನಾಂಕವನ್ನು ಜೇಷ್ಠತೆಯನ್ನಾಗಿ ಪರಿಗಣಿಸಿ ಯಾದಿಯನ್ನು ತಯಾರಿಸಿ ಕೇಂದ್ರ ಕಛೇರಿಗೆ ಮಂಜೂರಾತಿಗೆ ಸಲ್ಲಿಸುವುದು.
7. ವ್ಯವಸ್ಥಾಪಕ ನಿರ್ದೇಶಕರು, ಯಾದಿಯನ್ನು ಪರಿಶೀಲಿಸಿ ಮಂಜೂರಾತಿ ನೀಡಿ 15 ದಿನಗಳೊಳಗಾಗಿ ಜಿಲ್ಲಾಧಿಕಾರಿಗಳಿಗೆ ಹಿಂತಿರುಗಿಸುವುದು.
8. ಕೇಂದ್ರ ಕಛೇರಿಯಿಂದ ಮಂಜೂರಾತಿ ದೊರೆತ ನಂತರ ನಮೂನೆ-3 ರಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಿಂದಲೇ ಮಂಜೂರಾತಿ ಆದೇಶವನ್ನು 15 ದಿನಗಳೊಳಗಾಗಿ ಹೊರಡಿಸುವುದು ಮತ್ತು ಈ ಆದೇಶವನ್ನು ಜಿಲ್ಲಾ ವ್ಯವಸ್ಥಾಪಕರುಗಳಿಗೆ, ಭೂ ಮಾಲೀಕರಿಗೆ ಮತ್ತು ಫಲಾಪೇಕ್ಷಿಗಳಿಗೆ ನೀಡುವುದು.

8. ಮಂಜೂರಾತಿ ನಂತರ ಜಿಲ್ಲಾ ವ್ಯವಸ್ಥಾಪಕರು ತೆಗೆದುಕೊಳ್ಳಬೇಕಾದ ಕ್ರಮಗಳು

1) ಜಿಲ್ಲಾ ವ್ಯವಸ್ಥಾಪಕರು ಜಿಲ್ಲಾಧಿಕಾರಿಗಳ ಕಛೇರಿಯಿಂದ ಜಮೀನು ಖರೀದಿಗೆ ಮಂಜೂರಾತಿ ದೊರೆತ ನಂತರ 11ಇ ನಕಾಶೆ ಮಾಡಿಸತಕ್ಕದ್ದು.
2) ಫಲಾನುಭವಿಗೆ ಮಂಜೂರು ಮಾಡುವ ಸಾಲದ ಮೊತ್ತಕ್ಕೆ ಅಗತ್ಯವಿರುವ ಪ್ರೋ-ನೋಟ್, ಕನ್ಸಿಡರೇಷನ್- ರಶೀದಿ, ಸಾಲದ ಕರಾರು ಪತ್ರ ಹಾಗೂ ಇತರೆ ಪೂರಕ ದಾಖಲಾತಿಗಳನ್ನು ಪಡೆಯತಕ್ಕದ್ದು ಮತ್ತು ಸಾಲ ನೀಡಿರುವ ಬಗ್ಗೆ ವಿವರಗಳನ್ನು ನಿಗದಿತ ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು.
3) ಫಲಾನುಭವಿಯ ಹೆಸರಿಗೆ ಜಮೀನು ನೋಂದಣಿ ಮಾಡಿಸುವ ಮುನ್ನಾ ಭೂ ಮಾಲೀಕರು ಸ್ಥಳೀಯ ಬ್ಯಾಂಕುಗಳಿಂದ ಸಾಲ ಪಡೆದಿದ್ದಲ್ಲಿ ಬೇಬಾಕಿ ಪತ್ರ (NDC- NO DUE CERTIFICATE) ಪಡೆದು, ಅದರಂತೆ ಸಾಲದ ಮೊತ್ತವನ್ನು ನೇರವಾಗಿ ಹಣಕಾಸು ಸಂಸ್ಥೆಗೆ ನೀಡುವುದು. ತದನಂತರ ಜಮೀನಿನ ಮೇಲೆ ಬೋಜ / ಅಡಮಾನವು ಪಹಣಿ / ECಯಲ್ಲಿ ದಾಖಲಾಗಿದ್ದಲ್ಲಿ ತೆರವುಗೊಳಿಸಿ ಖುಲಾಸೆ ಪತ್ರ ಪಡೆದು ಉಳಿದ ಮೊತ್ತವನ್ನು ಭೂ ಮಾಲೀಕರಿಗೆ ಪಾವತಿಸುವುದು.
4) ಮಂಜೂರಾತಿಯಂತೆ ನೊಂದಣಿಯಾದ ನಂತರ ಪ್ರಥಮ ಹಂತದಲ್ಲಿ ಶೇ.80 ರಷ್ಟು ಅನುದಾನವನ್ನು ಭೂ ಮಾಲೀಕರಿಗೆ ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡುವುದು.
5) ಖರೀದಿ ಪತ್ರವನ್ನು ಉಪನೋಂದಣಾಧಿಕಾರಿಗಳಿಂದ ಪಡೆದು, ಫಲಾನುಭವಿಯ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದಿಸಲು ಕ್ರಮವಹಿಸುವುದು.

6) ನಿಗಮದ ಹೆಸರಿಗೆ ಜಮೀನು ಅಡಮಾನ ಮಾಡಿಕೊಳ್ಳತಕ್ಕದ್ದು ಮತ್ತು ಆರ್.ಟಿ.ಸಿ. / ಉತಾರೆ ಪಹಣಿಯ ಕಲಂ-11 ರಲ್ಲಿ ಪರಭಾರೆ ನಿಷೇಧಿಸಿದೆ ಎಂದು ದಾಖಲಿಸುವುದು.

7) ಭೂ ಮಾಲೀಕರಿಂದ ಫಲಾನುಭವಿಗೆ ಜಮೀನು ಹಸ್ತಾಂತರಿಸಿದ ಸ್ವಾಧೀನ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. (ನಮೂನೆ-5)

8) ಜಿಲ್ಲಾಧಿಕಾರಿ ಕಛೇರಿಯಿಂದ ಶೇ.20 ರಷ್ಟು ಅನುದಾನವನ್ನು ಬಿಡುಗಡೆ ಮಾಡುವ ಮುಂಚೆ ಮೇಲ್ಕಂಡ ಕ್ರಮ ಸಂಖ್ಯೆ 5 ರಿಂದ 7 ರವರೆಗಿನ ಮೂಲ ದಾಖಲಾತಿಗಳ ಪ್ರತಿಗಳನ್ನು ಜಿಲ್ಲಾಧಿಕಾರಿ ಕಛೇರಿಗೆ ಸಲ್ಲಿಸತಕ್ಕದ್ದು. (ನೋಂದಣಿ ಆದ ನಂತರ ಅಂದಾಜು 2 ತಿಂಗಳ ಸಮಯದಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸತಕ್ಕದ್ದು.)

9) ಮೇಲ್ಕಂಡ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಉಳಿದ ಶೇ.20 ರಷ್ಟು ಅನುದಾನವನ್ನು ಜಿಲ್ಲಾಧಿಕಾರಿ ಕಛೇರಿಯಿಂದ ಭೂ ಮಾಲೀಕರಿಗೆ ಬಿಡುಗಡೆ ಮಾಡುವುದು.

10) ಜಮೀನು ನೋಂದಣಿಯಾದ ನಂತರ ಜಮೀನು ಸರಹದ್ದನ್ನು ಸರ್ವೆಯರ್ ಮೂಲಕ ಗುರುತು ಹಾಕಿಸಿ, ಫಲಾನುಭವಿಗಳ ಸ್ವಾಧೀನಕ್ಕೆ ನೀಡತಕ್ಕದ್ದು.

11) ಜಮೀನು ನೋಂದಣಿಗೊಂಡ 45 ದಿವಸದೊಳಗಾಗಿ ಜಮೀನಿನ ಖಾತೆಯನ್ನು ಫಲಾನುಭವಿಯ ಹೆಸರಿಗೆ ವರ್ಗಾಯಿಸಲು ಮತ್ತು ಜಮೀನು ನಿಗಮಕ್ಕೆ ಆಧಾರಮಾಡಿಸಿ ಕಲಂ 11 ರಲ್ಲಿ ಪರಭಾರೆ ಮತ್ತು ಮಾರಾಟ ನಿಷೇದಿಸಿದೆ ಎಂದು ಪಹಣಿಯಲ್ಲಿ ನಮೂದಿಸಲ್ಪಡುವ ಕುರಿತು ಅಗತ್ಯ ಕ್ರಮ ಕೈಗೊಳ್ಳಬೇಕು ಮತ್ತು ನೋಂದಣಿ ನಂತರ ಎರಡನೇ ಇ.ಸಿಯನ್ನು ಪಡೆದು ಕಡತದಲ್ಲಿ ಇಟ್ಟುಕೊಳ್ಳತಕ್ಕದ್ದು.

ಅರ್ಜಿದಾರರ ಅರ್ಹತೆ, ಘಟಕ ವೆಚ್ಚ, ವಾಸಸ್ಥಳದಿಂದ ಜಮೀನಿನ ಅಂತರ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಜಾರಿಯಲ್ಲಿರುವ ಮಾರ್ಗಸೂಚಿ / ನಿಬಂಧನೆಗಳನ್ನು ಯಥಾವತ್ತಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಿಂಗುಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ಬೆಂಗಳೂರು.
5. ವಿಶೇಷಾಧಿಕಾರಿ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಭೋವಿ ಅಭಿವೃದ್ಧಿ ನಿಗಮ, ಬೆಂಗಳೂರು.
7. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲೆಗಳ ಉಪ / ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
9. ಎಲ್ಲಾ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರು, ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ.
10. ಎಲ್ಲಾ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ.
11. ಎಲ್ಲ ತಾಲ್ಲೂಕಿನ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು.
12. ಶಾಖಾ ರಕ್ಷಾ ಕಡತ.

ಪ್ರತಿ ಮಾಹಿತಿಗಾಗಿ

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.
2. ಸರ್ಕಾರದ ಉಪ ಕಾರ್ಯದರ್ಶಿ-1 ಮತ್ತು 2, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 83 ಕ್ಕೆ ಅನುಬಂಧ-2 ಹಾಸನ ಜಿಲ್ಲೆಯಲ್ಲಿ ಭೂ ಒಡೆತನ ಯೋಜನೆಯಡಿ ಸೌಲಭ್ಯ ಕಲ್ಪಿಸಲಾದ ಫಲಾನುಭವಿಗಳ ವಿವರ

2008-09

ಕ್ರ.ಸಂ.	ಭೂ ಮಾಲೀಕರ ಹೆಸರು ಶ್ರೀ/ಶ್ರೀಮತಿ	ಗ್ರಾಮ	ತಾಲ್ಲೂಕು	ಫಲಾನುಭವಿಗಳ ಹೆಸರು ಶ್ರೀಮತಿ	ಗ್ರಾಮ	ತಾಲ್ಲೂಕು	ವಿಸ್ತೀರ್ಣ	ಮೊತ್ತ
	ಜಿಲ್ಲೆ: ಹಾಸನ							
1	ಹೆಚ್.ಆರ್.ಶಿವಶಂಕರ ಬಿನ್ ಹೆಚ್.ಬಿ. ರೇವಣ್ಣ	ಹಿರೇಸಾದರಹಳ್ಳಿ	ಅರಸೀಕೆರೆ	ಶಾರದಮ್ಮ ಕೋಂ ಶೇಖರನಾಯಕ	ಹಿರೇಸಾದರಹಳ್ಳಿ	ಅರಸೀಕೆರೆ	2.00	1.00

2009-10

1	ಹಾಲಪ್ಪ ಬಿನ್ ಬಸಪ್ಪ	ಬೈರಾಪುರ	ಅರಸೀಕೆರೆ	ಲಲಿತಮ್ಮ ಕೋಂ ಕಡಪ	ಜೆ.ಸಿ.ಪುರ	ಅರಸೀಕೆರೆ	2.00	1.40
2	ರುದ್ರಪ್ಪ ಬಿನ್ ಸಿದ್ದಲಿಂಗಪ್ಪ	ಡಿ.ಎಂ.ಕುರ್ಕೆ	ಅರಸೀಕೆರೆ	ಲಕ್ಷ್ಮಮ್ಮ ಕೋಂ ಪುಟ್ಟನಾಯಕ	ಡಿ.ಎಂ.ಕುರ್ಕೆ	ಅರಸೀಕೆರೆ	2.00	1.20
3	ಕೆ.ಬಿ.ಜಟ್ಟಪ್ಪ ಬಿನ್ ಬಸಪ್ಪ	ಕಲ್ಲೂಂಡಿ	ಅರಸೀಕೆರೆ	ಸಾವಿತ್ರಮ್ಮ ಕೋಂ ಹನುಮಂತಪ್ಪ	ಗೊಲ್ಲರಹಳ್ಳಿ	ಅರಸೀಕೆರೆ	2.00	1.00

2010-11

1	ವೈ.ಜಿ.ಈಶ್ವರಪ್ಪ ಬಿನ್ ಗಂಗಣ್ಣ	ಯಾದಗೇನಹಳ್ಳಿ	ಅರಸೀಕೆರೆ	1. ಉಮಾ ಕೋಂ ರಮೇಶ	ಸೀಂಗೇನಹಳ್ಳಿ	ಅರಸೀಕೆರೆ	2.00	1.25
2	ಡಿ.ಎಸ್.ಮರುಳಪ್ಪ ಬಿನ್ ಸಮಾದಪ್ಪ	ಡಿ.ಎಂ.ಕುರ್ಕೆ	ಅರಸೀಕೆರೆ	1. ಶಾರದ ಕೋಂ ಕೊಟ್ರೇಶ್	ಡಿ.ಎಂ.ಕುರ್ಕೆ	ಅರಸೀಕೆರೆ	1.00	1.60
				2. ಕಮಲಮ್ಮ ಕೋಂ ರಂಗಸ್ವಾಮಿ	ಡಿ.ಎಂ.ಕುರ್ಕೆ	ಅರಸೀಕೆರೆ	1.00	1.60
3	ಹೆಚ್.ಆರ್.ಶಿವಶಂಕರ ಬಿನ್ ರೇವಣ್ಣ	ಹಿರೇಸಾದರಹಳ್ಳಿ	ಅರಸೀಕೆರೆ	1. ಅನ್ನಪೂರ್ಣಮ್ಮ ಕೋಂ ಕರಿಯಪ್ಪ	ಹಿರೇಸಾದರಹಳ್ಳಿ	ಅರಸೀಕೆರೆ	2.00	1.25

2011-12

1	ಜಟ್ಟಪ್ಪ ಕೆ.ಬಿ. ಬಿನ್ ಬಸಪ್ಪ	ಕಲ್ಗುಂಡಿ		1. ಹನುಮಂತಮ್ಮ ಕೋಂ ರಂಗನಾಥ	ಡಿ.ಎಂ.ಕುರ್ಕೆ	ಅರಸೀಕೆರೆ	1.35	1.51
2	ಡಿ.ಎಸ್. ಮರುಳಪ್ಪ ಬಿನ್ ಡಿ.ವೈ.ಸಮಾದಪ್ಪ	ಡಿ.ಎಂ.ಕುರ್ಕೆ	ಅರಸೀಕೆರೆ	1. ಶಾರದಮ್ಮ ಕೋಂ ಕೋರೇಶ್	ಡಿ.ಎಂ.ಕುರ್ಕೆ	ಅರಸೀಕೆರೆ	1.00	2.54
				2. ಕಮಲಮ್ಮ ಕೋಂ ರಂಗಸ್ವಾಮಿ	ಡಿ.ಎಂ.ಕುರ್ಕೆ	ಅರಸೀಕೆರೆ	1.00	2.54
3	ಸಿ. ನಂಜಪ್ಪ ಬಿನ್ ಚನ್ನಬಸಪ್ಪ	ಚಿಕ್ಕೊಂಡಹಳ್ಳಿ	ಅರಸೀಕೆರೆ	1. ಬದ್ರಮ್ಮ ಕೋಂ ನಾಗರಾಜಪ್ಪ	ಚಿಕ್ಕೊಂಡಹಳ್ಳಿ	ಅರಸೀಕೆರೆ	1.38	1.50